

بسم اللهِ الرّحمٰن الرّحيم

# ಹಝ್ರತ್ ಉಸ್ಮಾನ್(ರ)

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **29-01-2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಹಝ್ರತ್ ಉಸ್ಮಾನ್ ರಝಿಯಲ್ಲಾಹು ಅನ್‌ಹುರ ಯುದ್ಧಗಳಲ್ಲಿ ಭಾಗವಹಿಸುವಿಕೆಯ ಬಗ್ಗೆ ಪ್ರಸ್ತಾಪಿಸುತ್ತೇನೆ. ಹಝ್ರತ್ ಉಸ್ಮಾನ್(ರ)ರಿಗೆ ಬದ್ರ್ ಯುದ್ಧದಲ್ಲಿ ಭಾಗವಹಿಸಲು ಸಾಧ್ಯವಾಗಿರಲಿಲ್ಲ. ಏಕೆಂದರೆ ಅವರ ಪತ್ನಿಯಾದ ಹಝ್ರತ್ ರುಖಿಯ(ರ) ತೀವ್ರವಾಗಿ ರೋಗಗ್ರಸ್ತರಾಗಿದ್ದರು. ಆದ್ದರಿಂದ ಅವರ ಶುಶ್ರೂಷೆಗಾಗಿ ಮದೀನದಲ್ಲೇ ಇರಲು ಹಝ್ರತ್ ಪೈಗಂಬರ್(ಸ) ನಿರ್ದೇಶಿಸಿದ್ದರು ಮತ್ತು ಅವರನ್ನು ಬದ್ರ್ ಯುದ್ಧದಲ್ಲಿ ಭಾಗಿಯನ್ನಾಗಿ ಗಣಿಸಲಾಗಿತ್ತು. ಆದ್ದರಿಂದಲೇ ಯುದ್ಧದಲ್ಲಿ ಭಾಗಿಯಾದವರಿಗೆ ಕೊಡುವ ರೀತಿಯಲ್ಲಿ ಯುದ್ಧ ಸಂಪತ್ತಿನಿಂದ ಮತ್ತು ಪ್ರತಿಫಲದಿಂದ ಒಂದು ಭಾಗವನ್ನು ಅವರಿಗಾಗಿ ಹಝ್ರತ್ ಪೈಗಂಬರ್(ಸ) ನಿಶ್ಚಯಿಸಿದ್ದರು.

ಗ್ರತ್‌ಫಾನ್ ಯುದ್ಧ ಹಿಜರೀ 3ರಲ್ಲಿ ನಡೆದಿತ್ತು. ಇದಕ್ಕಾಗಿ ನಜದ್ ಪ್ರದೇಶದ ಕಡೆಗೆ ಹೊರಡುವಾಗ ಹಝ್ರತ್ ಪೈಗಂಬರ್(ಸ) ಹಝ್ರತ್ ಉಸ್ಮಾನ್(ರ)ರನ್ನು ಮದೀನದ ಅಮೀರರನ್ನಾಗಿ ನಿಶ್ಚಯಿಸಿದ್ದರು. ಈ ರೀತಿಯಲ್ಲಿ ಇದರಲ್ಲಿಯೂ ಅವರು ಭಾಗವಹಿಸಿರಲಿಲ್ಲ. ಈ ಯುದ್ಧದ ವಿವರಣೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್ ಹೀಗೆ ಹೇಳಿದ್ದಾರೆ:

ಬನೂ ಗ್ರತ್‌ಫಾನಿನ ಕೆಲವು ಗೋತ್ರಗಳು ಎಂದರೆ, ಬನೂ ಸಅ್‌ಲಬ ಮತ್ತು ಬನೂ ಮಹಾರಿಬ್‌ರ ಜನರು ತಮ್ಮ ಒಬ್ಬ ಪ್ರಮುಖ ಯೋಧನಾದ ಅಸೂರ್ ಬಿನ್ ಹಾರಿಸ್‌ನ ಪ್ರೇರಣೆಯ ಕಾರಣದಿಂದ ಮದೀನದ ಮೇಲೆ ಅಚಾನಕ್ಕಾಗಿ ಆಕ್ರಮಣ ನಡೆಸುವ ಉದ್ದೇಶದಿಂದ ನಜದಿನ ಒಂದು ಪ್ರದೇಶವಾದ ಧೀಅಮ್ರ್‌ನಲ್ಲಿ ಒಟ್ಟುಗೂಡಲು ಶುರುಮಾಡಿದರು. ಹಝ್ರತ್ ಪೈಗಂಬರ್(ಸ) ನಾನ್ನೂರ ಐವತ್ತು ಸಹಾಬಿಯರ ಒಂದು ಸಂಘವನ್ನು ತನ್ನೊಂದಿಗೆ ಸೇರಿಸಿ ಮದೀನದಿಂದ ತೆರಳಿದರು ಮತ್ತು ತ್ವರಿತವಾಗಿ ಮುನ್ನಡೆಯುತ್ತಾ ಧೀಅಮ್ರ್‌ಗೆ ಸಮೀಪ ತಲುಪಿದರು. ಶತ್ರುಗಳಿಗೆ ಹಝ್ರತ್ ಪೈಗಂಬರ್(ಸ)ರ ಆಗಮನದ ಬಗ್ಗೆ ಗೊತ್ತಾದಾಗ ಅವರು ಬೇಗನೇ ಸಮೀಪದ ಪರ್ವತಗಳನ್ನೇರಿ ಅಡಗಿಕೊಂಡರು. ಮುಸ್ಲಿಮರು ಧೀಅಮ್ರ್‌ಗೆ ತಲುಪಿದಾಗ ಮೈದಾನ ಖಾಲಿಯಾಗಿತ್ತು. ಹೀಗೆ ಸೈನ್ಯದೊಡನೆ ಮರಳಿಹೋಗಲು ಹಝ್ರತ್ ಪೈಗಂಬರ್(ಸ)ರಿಗೆ ಆದೇಶಿಸಬೇಕಾಯಿತು.

ಉಹ್‌ದ್ ಯುದ್ಧ ಶವ್ವಾಲ್ ಹಿಜರೀ 3ರಲ್ಲಿ ನಡೆದಿತ್ತು. ಹಝ್ರತ್ ಉಸ್ಮಾನ್(ರ) ಉಹ್‌ದ್ ಯುದ್ಧದಲ್ಲಿ ಭಾಗವಹಿಸಿದ್ದರು. ಯುದ್ಧದ ವೇಳೆ ಹಝ್ರತ್ ಪೈಗಂಬರ್(ಸ) ಶಹೀದ್ ಆದರು ಎಂಬ ವದಂತಿಯನ್ನು ಕೇಳಿಕೊಂಡು ಸಹಾಬಿಯರಲ್ಲಿ ಕೆಲವರು ಮೈದಾನದಿಂದ ಆಚೆ ಈಚೆ ಆದರು. ಹಝ್ರತ್ ಪೈಗಂಬರ್(ಸ)ರ ಶಹಾದತಿನ ವಾರ್ತೆಯಿಂದ ಮುಸ್ಲಿಮರ ಅಲ್ಪ ಸ್ವಲ್ಪ ಧೈರ್ಯವೂ ಕುಂದುತ್ತಿತ್ತು. ಮುಸ್ಲಿಮರ ಸಂಘ ಸಂಪೂರ್ಣವಾಗಿ ಚದುರಿ ಹೋಯಿತು. ಆ ಸಮಯದಲ್ಲಿ ಮುಸ್ಲಿಮರು ಮೂರು ಭಾಗಗಳಾಗಿ ವಿಭಜಿಸಲ್ಪಟ್ಟರು. ಅವುಗಳಲ್ಲಿ ಒಂದು ವಿಭಾಗ ಹಝ್ರತ್ ಪೈಗಂಬರ್(ಸ)ರ ಶಹಾದತಿನ ವಾರ್ತೆ ಕೇಳಿ ಚದುರಿಹೋಗಿತ್ತು. ಆದರೆ ಈ ವಿಭಾಗದವರು ಬಹಳ ಕಡಿಮೆಯಾಗಿದ್ದರು. ಆ ಜನರಲ್ಲಿ ಹಝ್ರತ್ ಉಸ್ಮಾನ್ ಬಿನ್ ಅಫ್ಫಾನ್ ಸಹ ಇದ್ದರು. ಆದರೆ ಆ ಸಮಯದ ವಿಶೇಷವಾದ ಸ್ಥಿತಿ ಮತ್ತು ಆ ಜನರ ಹೃದಯದ ವಿಶ್ವಾಸ ಹಾಗೂ ನಿಷ್ಠೆಯನ್ನು ದೃಷ್ಟಿಯಲ್ಲಿರಿಸುತ್ತಾ ಅಲ್ಲಾಹನು ಅವರನ್ನು ಕ್ಷಮಿಸಿದನು ಎಂದು ಆ ಜನರಿಗೆ ಸಂಬಂಧಿಸಿ ಪವಿತ್ರ ಖುರ್‌ಆನಿನಲ್ಲಿ ಪ್ರಸ್ತಾಪಿಸಲಾಗಿದೆ. ಎರಡನೇ ವಿಭಾಗದವರು ಚದುರಿ ಹೋಗಿರಲಿಲ್ಲ. ಆದರೆ ಹಝ್ರತ್ ಪೈಗಂಬರ್(ಸ)ರ ಶಹಾದತಿನ ವಾರ್ತೆಯನ್ನು ಕೇಳಿ ಧೈರ್ಯಗುಂದಿದ್ದರು ಅಥವಾ ಈ ಸ್ಥಿತಿಯಲ್ಲಿ ಹೋರಾಡುವುದನ್ನು ವ್ಯರ್ಥವೆಂದು ಭಾವಿಸುತ್ತಿದ್ದರು. ಆದ್ದರಿಂದ ಯುದ್ಧ ಮೈದಾನದ ಒಂದು ಬದಿಗೆ ಸರಿಯುತ್ತಾ ತಲೆತಗ್ಗಿಸಿ ಕುಳಿತುಕೊಂಡಿದ್ದರು. ಮೂರನೇ ವಿಭಾಗದವರು ಹೋರಾಟವನ್ನು ಜಾರಿಯಲ್ಲಿರಿಸಿದ್ದರು. ಅವರಲ್ಲಿ ಕೆಲವರು ಹಝ್ರತ್ ಪೈಗಂಬರ್(ಸ)ರ ಸುತ್ತಮುತ್ತ ಇದ್ದರು ಮತ್ತು ಅತುಲ್ಯವಾದ ತ್ಯಾಗದ ಕೌಶಲವನ್ನು ಪ್ರಕಟಿಸುತ್ತಿದ್ದರು ಹಾಗೂ ಈ ವಿಭಾಗದ ಹೆಚ್ಚಿನವರು ರಣರಂಗದಲ್ಲಿ ಬೇರೆ ಬೇರೆಯಾಗಿ ಹೋರಾಡುತ್ತಿದ್ದರು.

ಹೇಗಿದ್ದರೂ ಹಝ್ರತ್ ಉಸ್ಮಾನ್(ರ) ನಿರಾಶೆಗೊಂಡು ಅಥವಾ ಬೇರೆ ಯಾವುದೋ ಕಾರಣದಿಂದ ಹಝ್ರತ್ ಪೈಗಂಬರ್(ಸ)ರ ಮರಣ ವಾರ್ತೆಯನ್ನು ಕೇಳಿ ಅಲ್ಲಿಂದ ಹೊರಟುಬಿಟ್ಟಿದ್ದರು ಎಂದು ಹೇಳಲಾಗುತ್ತದೆ. ಈ ರೀತಿಯಲ್ಲಿ ನಿರಾಶೆಗೊಂಡು ಕುಳಿತವರಲ್ಲಿ ಹಝ್ರತ್ ಉಮರ್ ರಝಿಯಲ್ಲಾಹು ಅನ್‌ಹುರ ಹೆಸರು ಸಹ ಬರುತ್ತದೆ.

ಹುದೈಬಿಯ ಸಂಧಿಯ ವೇಳೆ ನಡೆದ ಸಮಾಲೋಚನೆಯಲ್ಲಿ ಮತ್ತು ಬೈಅತೇ ರಿಝ್‌ವಾನಿನಲ್ಲಿ ಹಝ್ರತ್ ಉಸ್ಮಾನ್(ರ) ವಹಿಸಿದ ಪಾತ್ರದ ಬಗ್ಗೆ ಮತ್ತು ಅವರ ಕುರಿತು ಲಭಿಸುವ ಘಟನೆಗಳನ್ನು ನಾನೀಗ ವಿವರಿಸುತ್ತೇನೆ. ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಾಬಿಯರು ತಮ್ಮ ತಲೆಗಳನ್ನು ಬೋಳಿಸಿ ಮತ್ತು ಕೂದಲುಗಳನ್ನು ಚಿಕ್ಕದು ಮಾಡಿಕೊಂಡು ಕಅ್‌ಬ ಪ್ರವೇಶಿಸುತ್ತಿರುವುದಾಗಿ ಹಝ್ರತ್ ಪೈಗಂಬರ್(ಸ) ಕನಸಿನಲ್ಲಿ ಕಂಡರು. ಈ ಸ್ವಪ್ನದ ಆಧಾರದಲ್ಲಿ ಹಝ್ರತ್ ಪೈಗಂಬರ್(ಸ) ಧುಲ್‌ಖಅದ್ ಹಿಜರೀ 6ರಲ್ಲಿ ತಮ್ಮ 1400 ಸಹಾಬಿಯರ ಜೊತೆ ಉಮ್ರ ಮಾಡಲು ಮದೀನದಿಂದ ತೆರಳಿದರು. ಹುದೈಬಿಯಾ ಎಂಬ ಸ್ಥಳದಲ್ಲಿ ಅವರು ತಂಗಿದರು. ಖುರೈಶಿಗಳು ಹಝ್ರತ್ ಪೈಗಂಬರ್(ಸ)ರನ್ನು ಉಮ್ರ ಮಾಡುವುದರಿಂದ ತಡೆದರು.

ಉಭಯ ಪಕ್ಷಗಳ ನಡುವೆ ಸಮಾಲೋಚನೆಯ ಮಾತುಕತೆಯ ಆರಂಭವಾಯಿತು. ಹಝ್ರತ್ ಪೈಗಂಬರ್[ಸ] ಮಕ್ಕದ ಜನರ ಆವೇಶದ ಸ್ಥಿತಿಯ ಬಗ್ಗೆ ಕೇಳಿದಾಗ, ಮಕ್ಕಾ ನಿವಾಸಿಯಾದ, ಖುರೈಶಿಗಳ ಯಾವುದಾದರೂ ಗೌರವಾನ್ವಿತ ಗೋತ್ರದವರಾದ ಮತ್ತು ಪ್ರಭಾವಶಾಲಿಯಾದ ಯಾರನ್ನಾದರೂ ಮಕ್ಕದ ಕಡೆಗೆ ಕಳುಹಿಸುವುದಾಗಿ ಹೇಳಿದರು. ಹೀಗೆ ಹಝ್ರತ್ ಉಸ್ಮಾನ್[ರ]ರನ್ನು ಈ ಉದ್ದೇಶಕ್ಕಾಗಿ ಕಳುಹಿಸಲಾಯಿತು.

ಖುರೈಶಿಯರಲ್ಲಿ ಆ ಸಮಯದಲ್ಲಿ ತೀವ್ರವಾದೊಂದು ಬಿರುಕಿನ ಅವಸ್ಥೆ ಉಂಟಾಗಿತ್ತು. ಜನರ ಎರಡು ಪಕ್ಷಗಳು ಉಂಟಾಗಿದ್ದುವು. ಏನೇ ಆದರೂ ಮುಸ್ಲಿಮರನ್ನು ವಾಪಾಸ್ಸು ಕಳುಹಿಸಲು ಮತ್ತು ಅವರ ವಿರುದ್ಧ ಹೋರಾಟ ನಡೆಸುವ ತೀವ್ರ ಉದ್ದೇಶವನ್ನು ಒಂದು ಪಕ್ಷ ಹೊಂದಿತ್ತು. ಆದರೆ ಇನ್ನೊಂದು ಪಕ್ಷದವರು ಇದನ್ನು ತಮ್ಮ ಪುರಾತನ ಧಾರ್ಮಿಕ ಪರಂಪರೆಗಳ ವಿರುದ್ಧವೆಂದು ಕಂಡು ಹೆದರುತ್ತಿದ್ದರು ಮತ್ತು ಏನಾದರೂ ಗೌರವಾನ್ವಿತ ಸಂಧಾನವನ್ನು ಮಾಡಲು ಬಯಸುತ್ತಿದ್ದರು. ಆದ್ದರಿಂದ ತೀರ್ಮಾನ ಇತ್ಯರ್ಥಗೊಳ್ಳದೆ ಉಳಿದಿತ್ತು. ಹಝ್ರತ್ ಪೈಗಂಬರ್[ಸ] ಮತ್ತು ಅವರ ಸಹಾಬಿಯರು ಮಕ್ಕದ ಬಹಳ ಸಮೀಪ ತಲುಪಿರುವ ಕಾರಣ ಅವರ ಮೇಲೆ ಹಲ್ಲೆ ನಡೆಸಿ ಅವರಿಗೆ ಸಾಧ್ಯವಾದಷ್ಟು ನಷ್ಟವನ್ನು ಉಂಟುಮಾಡಲು ಸಹ ಮಕ್ಕದ ಖುರೈಶಿಗಳು ಆವೇಶ ಭರಿತರಾಗಿದ್ದರು. ಹಾಗೆ ಆ ಉದ್ದೇಶಕ್ಕಾಗಿ ಅವರು 40, 50 ಜನರ ಒಂದು ಸಂಘವನ್ನು ಹುದೈಬಿಯದ ಕಡೆಗೆ ರವಾನೆ ಮಾಡಿದರು. ಮುಸ್ಲಿಮರ ಡೇರೆಯ ಆಸುಪಾಸು ಸುತ್ತಾಡುತ್ತಾ ಹೊಂಚು ಹಾಕುತ್ತಾ ಇದ್ದುಕೊಂಡು ಸಂದರ್ಭ ಸಿಗುವಾಗ ಮುಸ್ಲಿಮರಿಗೆ ನಷ್ಟ ಉಂಟುಮಾಡಲು ಅವರಿಗೆ ನಿರ್ದೇಶನ ನೀಡಲಾಗಿತ್ತು. ಈ ಸಂದರ್ಭದಲ್ಲಿ ಖುರೈಶಿಯರು ಹಝ್ರತ್ ಪೈಗಂಬರ್[ಸ]ರನ್ನು ವಧಿಸಲು ಸಹ ಸಂಚು ಹಾಕಿದ್ದರು. ಹೇಗಿದ್ದರೂ ಅಲ್ಲಾಹನ ಅನುಗ್ರಹದಿಂದ ಮುಸ್ಲಿಮರು ಎಚ್ಚರದಿಂದಿದ್ದರು. ಹೀಗೆ ಖುರೈಶಿಗಳ ಒಳಸಂಚಿನ ರಹಸ್ಯ ಬಯಲಾಯಿತು ಮತ್ತು ಅವರೆಲ್ಲರನ್ನೂ ಬಂಧಿಸಲಾಯಿತು.

ಹೇಗಿದ್ದರೂ ಈ ಎಲ್ಲ ಸಂದರ್ಭಗಳಲ್ಲಿ ಮತ್ತು ಈ ಹಿನ್ನೆಲೆಯಲ್ಲಿ, ಲೋಕದಲ್ಲಿ ಎಲ್ಲೂ ಕಾಣಲು ಸಿಗದಂತಹ ಸ್ಥಿರವಾದ ಸಹನೆ, ಧೈರ್ಯ ಮತ್ತು ಶಾಂತಿಸ್ಥಾಪನೆಯ ಅತುಲ್ಯವಾದ ಪ್ರಯತ್ನವನ್ನು ಹಝ್ರತ್ ಪೈಗಂಬರ್[ಸ]ರ ಜೀವಿತದಲ್ಲಿ ನಾವು ನೋಡುತ್ತೇವೆ. ಶಾಂತಿಸ್ಥಾಪನೆ ಮಾಡಿಸುವ ಪ್ರಯತ್ನದಲ್ಲಿ ಅವರು ನಿರತರಾಗಿದ್ದರು. ಈ ಅವಸ್ಥೆಯಲ್ಲೂ ಅವರು ಸಂಧಾನದ ಪ್ರಯತ್ನವನ್ನು ಕೈಬಿಟ್ಟಿರಲಿಲ್ಲ. ಮಾತ್ರವಲ್ಲ, ಮಕ್ಕಕ್ಕೆ ಹೋಗಿ ಮುಸ್ಲಿಮರ ಪರವಾಗಿ ದೂತನ ಕರ್ತವ್ಯವನ್ನು ನೆರವೇರಿಸಲು ಹಝ್ರತ್ ಪೈಗಂಬರ್[ಸ] ಹಝ್ರತ್ ಉಮರ್ ಬಿನ್ ಖತ್ತಾಬ್[ರ]ರೊಡನೆ ಹೇಳಿದರು. ಈ ಕೆಲಸಕ್ಕಾಗಿ ಉಸ್ಮಾನ್[ರ]ರನ್ನು ಆಯ್ಕೆ ಮಾಡಲು ಹಝ್ರತ್ ಉಮರ್[ರ] ಹೇಳಿದರು. ಏಕೆಂದರೆ ಹಝ್ರತ್ ಉಸ್ಮಾನ್[ರ]ರ ಗೋತ್ರವಾದ ಬನೂ ಉಮಯ್ಯ ಆಗ ತುಂಬ ಪ್ರಭಾವಶಾಲಿಯಾಗಿತ್ತು. ಆದ್ದರಿಂದ ಮಕ್ಕಾದವರು ಉಸ್ಮಾನ್[ರ]ರ ವಿರುದ್ಧ ಹಿಂಸೆ ಮಾಡಲು ಧೈರ್ಯಪಡಲಾರರು ಮತ್ತು ಅವರು ಈ ಕಾರ್ಯದಲ್ಲಿ ಯಶಸ್ವಿಯಾಗುವರು ಎಂಬ ಹೆಚ್ಚಿನ ಪ್ರತೀಕ್ಷೆ ಇತ್ತು. ಹಝ್ರತ್ ಪೈಗಂಬರ್[ಸ] ಈ ಸಲಹೆಯನ್ನು ಇಷ್ಟಪಟ್ಟರು. ಮುಸ್ಲಿಮರ ಶಾಂತಿಪೂರ್ಣವಾದ ಸದುದ್ದೇಶದ ಮತ್ತು ಉಮ್ರ ಮಾಡುವ ಉದ್ದೇಶದ ಬಗ್ಗೆ ಖುರೈಶಿಯರಿಗೆ ತಿಳಿಸಲಿಕ್ಕಾಗಿ ಮಕ್ಕಕ್ಕೆ ಹೋಗಲು ಹಝ್ರತ್ ಉಸ್ಮಾನ್[ರ]ರೊಡನೆ ಹಝ್ರತ್ ಪೈಗಂಬರ್[ಸ] ಹೇಳಿದರು. ಖುರೈಶೀ ಸರದಾರರ ಹೆಸರಲ್ಲಿ ಒಂದು ಪತ್ರವನ್ನು ಸಹ ಬರೆದುಕೊಟ್ಟರು. ಆ ಪತ್ರದಲ್ಲಿ ಹಝ್ರತ್ ಪೈಗಂಬರ್[ಸ] ತನ್ನ ಬರುವಿಕೆಯ ಉದ್ದೇಶವನ್ನು ಹೇಳಿದ್ದರು. "ನಮ್ಮ ಉದ್ದೇಶ ಒಂದು ಆರಾಧನೆಯ ಅನುಷ್ಠಾನವಾಗಿದೆ ಹಾಗೂ ನಾವು ಶಾಂತಿಪೂರ್ಣವಾಗಿ ಉಮ್ರ ನಿರ್ವಹಿಸಿ ಮರಳಿ ಹೋಗುವೆವು" ಎಂದು ಖುರೈಶಿಯರಿಗೆ ಭರವಸೆ ಕೊಟ್ಟಿದ್ದರು. ಮಕ್ಕದಲ್ಲಿರುವ ದುರ್ಬಲ ಮುಸ್ಲಿಮರನ್ನು ಭೇಟಿಯಾಗಲು ಸಹ ಹಝ್ರತ್ ಪೈಗಂಬರ್[ಸ] ಹಝ್ರತ್ ಉಸ್ಮಾನ್‌ರಿಗೆ ನಿರ್ದೇಶನ ಕೊಟ್ಟರು. ಅವರಿಗೆ ಧೈರ್ಯ ಕೊಡಲು, ಅವರೊಡನೆ ಸಹನೆಯಿಂದ ಇರಲು ಮತ್ತು ಅಲ್ಲಾಹನು ಬೇಗನೇ ವಿಜಯದ ಬಾಗಿಲು ತೆರೆಯುವನು ಎಂದು ಹೇಳಲು ನಿರ್ದೇಶಿಸಿದರು. ಈ ಸಂದೇಶದೊಂದಿಗೆ ಹಝ್ರತ್ ಉಸ್ಮಾನ್[ರ] ಮಕ್ಕಕ್ಕೆ ಹೋದರು ಮತ್ತು ಅಬೂ ಸುಫ್‌ಯಾನ್‌ರನ್ನು ಭೇಟಿಯಾಗಿ ಮಕ್ಕಾ ನಿವಾಸಿಗಳ ಒಂದು ಸಾರ್ವಜನಿಕ ಸಭೆಯ ಮುಂದೆ ನಿಂತರು. ಈ ಸಭೆಯಲ್ಲಿ ಹಝ್ರತ್ ಉಸ್ಮಾನ್[ರ] ಹಝ್ರತ್ ಪೈಗಂಬರ್[ಸ]ರ ಸಂದೇಶವನ್ನು ವಿವರಿಸಿದರು. ಆದರೆ ಹೇಗಿದ್ದರೂ ಮುಸ್ಲಿಮರು ಈ ವರ್ಷ ಮಕ್ಕ ಪ್ರವೇಶಿಸಬಾರದೆಂಬ ಹಟವನ್ನು ಖುರೈಶಿಗಳು ಬಿಡಲಿಲ್ಲ. ಹಝ್ರತ್ ಉಸ್ಮಾನ್[ರ] ಒತ್ತಾಯ ಪಡಿಸಿದಾಗ ಖುರೈಶಿಯರು ಹೇಳಿದರು: 'ನಿಮಗೆ ಹೆಚ್ಚು ಆಸಕ್ತಿಯಿರುವುದಾದರೆ, ಕಅ್‌ಬದ ತವಾಫ್ ಮಾಡುವ ಅವಕಾಶವನ್ನು ನಿಮಗೆ ಮಾತ್ರ ಕೊಡುವೆವು.' ಹಝ್ರತ್ ಉಸ್ಮಾನ್[ರ] ಹೇಳಿದರು: 'ಹಝ್ರತ್ ಪೈಗಂಬರ್[ಸ]ರನ್ನು ಮಕ್ಕದ ಹೊರಗೆ ತಡೆದು ನಿಲ್ಲಿಸಿ ನಾನು ಹೇಗೆ ತವಾಫ್ ಮಾಡಲಿ.' ಆದರೆ ಖುರೈಶಿಯರು ಯಾವ ರೀತಿಯಲ್ಲೂ ಸಮ್ಮತಿಸಲಿಲ್ಲ. ಕೊನೆಗೆ ಹಝ್ರತ್ ಉಸ್ಮಾನ್[ರ] ನಿರಾಶೆಗೊಂಡು ಮರಳಿಹೋಗಲು ತಯಾರಿ ಮಾಡಿದರು. ಈ ಸಂದರ್ಭದಲ್ಲಿ ಹಝ್ರತ್ ಉಸ್ಮಾನ್[ರ]ರನ್ನು ಮತ್ತು ಅವರ ಸಂಗಡಿಗರನ್ನು ಮಕ್ಕದಲ್ಲೇ ತಡೆದಿಡುವ ಚೇಷ್ಟೆಯನ್ನು ಮಕ್ಕದ ದುಷ್ಟರು ಮಾಡಿದರು. ಇದರಿಂದ ಮಕ್ಕದವರು ಹಝ್ರತ್ ಉಸ್ಮಾನ್[ರ]ರನ್ನು ಕೊಂದರು ಎಂಬ ವದಂತಿ ಮುಸ್ಲಿಮರೆಡೆಯಲ್ಲಿ ಹರಡಿತು.

ಈ ವಾರ್ತೆ ಹುದೈಬಿಯಕ್ಕೆ ಮುಟ್ಟಿದಾಗ ಮುಸ್ಲಿಮರು ತೀವ್ರವಾಗಿ ಆವೇಶಭರಿತರಾದರು. ಏಕೆಂದರೆ ಹಝ್ರತ್ ಉಸ್ಮಾನ್[ರ] ಹಝ್ರತ್ ಪೈಗಂಬರ್[ಸ]ರ ಅಳಿಯರಾಗಿದ್ದರು ಮತ್ತು ಆದರಣೀಯ ಸಹಾಬಿಯರಲ್ಲಿ ಒಬ್ಬರಾಗಿದ್ದರು ಹಾಗೂ ಮುಸ್ಲಿಮರ ಪರವಾಗಿ ದೂತರಾಗಿ ಹೋಗಿದ್ದರು. ಮುಸ್ಲಿಮರನ್ನು ಒಂದು ಬಾಬುಲ್ ಮರದ ಕೆಳಗೆ ಬಂದು ಸೇರಲು ಹಝ್ರತ್ ಪೈಗಂಬರ್[ಸ] ಘೋಷಿಸಿ ಬೇಗನೇ ಒಟ್ಟುಗೂಡಿಸಿದರು ಮತ್ತು ಹೀಗೆ ಹೇಳಿದರು: ಈ ವಾರ್ತೆ ಸರಿಯೆಂದಾದರೆ, ಅಲ್ಲಾಹನಾಣೆ, ಉಸ್ಮಾನ್‌ರ ಕೊಲೆಯ ಪ್ರತಿಕಾರವನ್ನು ತೀರಿಸುವವರೆಗೆ ನಾವು ಇಲ್ಲಿಂದ ಸರಿಯುವುದಿಲ್ಲ. ಅನಂತರ ಹಝ್ರತ್ ಪೈಗಂಬರ್[ಸ]

ಸಹಾಬರೊಡನೆ ಹೇಳಿದರು: ಬನ್ನಿರಿ, ನನ್ನ ಕೈಯ ಮೇಲೆ ಕೈಗಳನ್ನು ಇಟ್ಟುಕೊಂಡು, ನಿಮ್ಮಲ್ಲಿ ಯಾರೂ ಹಿಮ್ಮೆಟ್ಟಲಾರೆವು ಮತ್ತು ಜೀವತ್ಯಾಗ ಮಾಡಲು ತಯಾರಾಗುವೆವು ಆದರೆ ತನ್ನ ಜಾಗವನ್ನು ಬಿಟ್ಟುಹೋಗಲಾರೆವು ಎಂದು ಪ್ರತಿಜ್ಞೆ ಮಾಡಿರಿ. ಹೀಗೆ ಘೋಷಿಸಲ್ಪಟ್ಟಾಗ, ಸಹಾಬಿಯರು ಒಬ್ಬರ ಮೇಲೆ ಇನ್ನೊಬ್ಬರು ಬೀಳುವ ರೀತಿಯಲ್ಲಿ ಅವಸರದಲ್ಲಿ ಬೈಅತ್ ಮಾಡಲು ಮುಂದೆ ಬರುತ್ತಿದ್ದರು. ಬೈಅತ್ ನಡೆಯುತ್ತಿರುವಾಗ ಹಝ್ರತ್ ಪೈಗಂಬರ್(ಸ) ತನ್ನ ಎಡಗೈಯನ್ನು ಬಲಗೈಯ ಮೇಲೆ ಹಾಕಿಕೊಂಡು ಹೇಳಿದರು: ಇದು ಉಸ್ಮಾನ್(ರ)ರ ಕೈಯಾಗಿದೆ. ಏಕೆಂದರೆ ಅವರು ಇಲ್ಲಿ ಇರುತ್ತಿದ್ದರೆ ಈ ಪರಿಶುದ್ಧವಾದ ಕಾರ್ಯದಲ್ಲಿ ಅವರು ಮುಂದಿರುತ್ತಿದ್ದರು. ಆದರೆ ಈಗ ಅವರು ಅಲ್ಲಾಹನ ಮತ್ತು ಅವನ ಪ್ರವಾದಿಯ ಕೆಲಸದಲ್ಲಿ ನಿರತರಾಗಿದ್ದಾರೆ.

ಇಸ್ಲಾಮಿನ ಚರಿತ್ರೆಯಲ್ಲಿ ಈ ಬೈಅತ್ ಬೈಅತೇ ರಿಝ್ವಾನ್ ಎಂಬ ಹೆಸರಲ್ಲಿ ಪ್ರಸಿದ್ಧಿಯನ್ನು ಪಡೆದಿದೆ. ಎಂದರೆ ಮುಸ್ಲಿಮರು ಅಲ್ಲಾಹನ ಪರಿಪೂರ್ಣ ಸಂಪ್ರೀತಿಯ ವರದಾನವನ್ನು ಪಡೆದಿದ್ದ ಬೈಅತ್. ಪವಿತ್ರ ಖುರ್‌ಆನ್ ಸಹ ಈ ಬೈಅತಿನ ಬಗ್ಗೆ ವಿಶೇಷವಾಗಿ ಪ್ರಸ್ತಾಪಿಸಿದೆ. ಅದು ಹೀಗೆ ಹೇಳುತ್ತದೆ:

لَقَدْ رَضِيَ اللّٰهُ عَنِ الْمُؤْمِنِيْنَ اِذْ يُبَايِعُوْنَكَ تَحْتَ الشَّجَرَةِ فَعَلِمَ مَا فِيْ قُلُوْبِهِمْ فَاَنْزَلَ السَّكِيْنَةَ

عَلَيْهِمْ وَاَثَابَهُمْ فَتْحًا قَرِيْبًا

ಎಂದರೆ, ಆ ವೃಕ್ಷದ ಕೆಳಗೆ ಸತ್ಯವಿಶ್ವಾಸಿಗಳು ನಿನ್ನೊಡನೆ ನಿಷ್ಠೆಯ ಪ್ರತಿಜ್ಞೆ ಮಾಡಿದಾಗ ಅಲ್ಲಾಹನು ಅವರ ಬಗ್ಗೆ ಸಂಪ್ರೀತನಾಗಿದ್ದನು. ಅವರ ಹೃದಯಾಂತರಾಳದಲ್ಲಿ ಏನು ಇತ್ತೆಂದು ಅವನಿಗೆ ತಿಳಿದಿತ್ತು. ಹಾಗೆ ಅವನು ಅವರಿಗೆ ಮನಶ್ಶಾಂತಿ ಪ್ರದಾನ ಮಾಡಿದನು. ಶೀಘ್ರದಲ್ಲೇ ಒಂದು ವಿಜಯವನ್ನೂ ಅವರಿಗೆ ಪ್ರತಿಫಲವಾಗಿ ನೀಡಿದನು. (48:19).

ಖುರೈಶಿಗಳಿಗೆ ಈ ಬೈಅತಿನ ಸುದ್ದಿ ತಲುಪಿದಾಗ ಅವರು ಭಯಗೊಂಡರು. ಅವರು ಹಝ್ರತ್ ಉಸ್ಮಾನ್(ರ) ಮತ್ತು ಅವರ ಸಂಗಡಿಗರನ್ನು ಬಿಡುಗಡೆಗೊಳಿಸಿದರು. ಮಾತ್ರವಲ್ಲ, ಹೇಗಾದರೂ ಮುಸ್ಲಿಮರೊಡನೆ ಒಪ್ಪಂದ ಮಾಡಲು ತಮ್ಮ ಪ್ರತಿನಿಧಿಗಳಿಗೆ ನಿರ್ದೇಶನ ಕೊಟ್ಟರು. ಈ ಒಪ್ಪಂದದ ಶರತ್ತುಗಳು ಕೆಳಗಿನಂತಿವೆ:

ಹಝ್ರತ್ ಪೈಗಂಬರ್(ಸ) ಮತ್ತು ಅವರ ಸಹಚರರು ಈ ವರ್ಷ ಮರಳಿ ಹೋಗಬೇಕು. ಮುಂದಿನ ವರ್ಷ ಮಕ್ಕಕ್ಕೆ ಬಂದು ಉಮ್ರ ನಿರ್ವಹಿಸಬಹುದು. ಆದರೆ ಕವಚದಲ್ಲಿ ಹಾಕಲಾದ ಖಡ್ಗಗಳ ಹೊರತು ಬೇರೆ ಆಯುಧಗಳು ಜೊತೆಗೆ ಇರಬಾರದು ಮತ್ತು ಮಕ್ಕದಲ್ಲಿ ಮೂರು ದಿನಗಳಿಗಿಂತ ಹೆಚ್ಚು ತಂಗಬಾರದು. ಮಕ್ಕದ ಪುರುಷರಲ್ಲಿ ಯಾವನಾದರೂ ಮದೀನಕ್ಕೆ ಹೋದರೆ, ಅವನು ಮುಸ್ಲಿಮನಾದರೂ ಸರಿ, ಅವನಿಗೆ ಹಝ್ರತ್ ಪೈಗಂಬರ್(ಸ) ಆಶ್ರಯ ಕೊಡಬಾರದು ಮತ್ತು ಮರಳಿಸಬೇಕು. ಆದರೆ ಮುಸ್ಲಿಮನಾದ ಯಾವನಾದರೂ ಮದೀನ ಬಿಟ್ಟು ಮಕ್ಕಕ್ಕೆ ಹೋದರೆ ಅವನನ್ನು ಮರಳಿಸಲಾಗುವುದಿಲ್ಲ. ಅರೇಬಿಯದ ಗೋತ್ರಗಳಲ್ಲಿ ಯಾವುದೇ ಗೋತ್ರ ಬೇಕಾದರೂ ಮುಸ್ಲಿಮರ ಅಥವಾ ಮಕ್ಕಾ ನಿವಾಸಿಯರ ಸಹಾಯಕರಾಗಬಹುದು. ಈ ಒಪ್ಪಂದ ಸದ್ಯದಲ್ಲಿ ಹತ್ತು ವರ್ಷಕ್ಕೆ ಆಗಿರುವುದು. ಈ ಕಾಲಾವಧಿಯಲ್ಲಿ ಖುರೈಶಿಯರ ಮತ್ತು ಮುಸ್ಲಿಮರ ಮಧ್ಯೆ ಯುದ್ಧ ಸ್ಥಗಿತಗೊಂಡಿರುವುದು.

(ಹುಝೂರ್ ಹೇಳಿದರು:) ಹಝ್ರತ್ ಉಸ್ಮಾನ್‌ರ ಪ್ರಸ್ತಾಪ ಮುಂದೆಯೂ ನಡೆಯುವುದು. ಪ್ರಾರ್ಥನೆಗಳ ಕಡೆಗೆ ಈಗಲೂ ನಿಮ್ಮ ಗಮನವನ್ನು ಸೆಳೆಯಲು ಬಯಸುತ್ತೇನೆ. ಪಾಕಿಸ್ತಾನದ ಸ್ಥಿತಿಗತಿಗಳಿಗಾಗಿ ವಿಶೇಷವಾಗಿ ದುಆ ಮಾಡುತ್ತಿರಿ. ಅಹ್ಮದಿಯರು ಮನೆಯ ನಾಲ್ಕು ಗೋಡೆಗಳ ಒಳಗೆ ಸಹ ಈಗ ಸುರಕ್ಷಿತರಲ್ಲ. ಮೌಲವಿಗಳು ಹೇಳುವ ಜಾಗಕ್ಕೆ ಪೊಲೀಸರು ತಲುಪುತ್ತಾರೆ. 'ನಮ್ಮ ಸಹಾನುಭೂತಿ ನಿಮ್ಮೊಂದಿಗೆ ಇದೆ, ಆದರೆ ನಾವು ಏನು ಮಾಡಲಿ, ನಮ್ಮ ಮೇಲೆ ಎಷ್ಟು ಒತ್ತಡ ಹಾಕಲಾಗಿದೆ ಎಂದರೆ, ನಮ್ಮ ಅಧಿಕಾರಿಗಳು ಹೇಳುವುದನ್ನು ನಮಗೆ ಮಾಡಬೇಕಾಗುತ್ತದೆ' ಎಂದು ಹೇಳುವ ಕೆಲವು ಪೊಲೀಸರು ಸಹ ಇದ್ದಾರೆ. ಅಲ್ಲಾಹನು ಇಂತಹ ದುಷ್ಟ ಸ್ವಭಾವದ ಅಧಿಕಾರಿಗಳಿಂದ ನಮ್ಮನ್ನು ಮುಕ್ತಗೊಳಿಸಲಿ, ದೇಶವನ್ನು ರಕ್ಷಿಸಲಿ ಮತ್ತು ಪ್ರತಿಯೊಬ್ಬ ಅಹ್ಮದಿಗೆ ಸ್ವತಂತ್ರವಾಗಿ ಹಾಗೂ ಸುರಕ್ಷಿತವಾದ ರೀತಿಯಲ್ಲಿ ತಮ್ಮ ದೇಶದಲ್ಲಿ ಇರಲು ಸೌಭಾಗ್ಯ ನೀಡಲಿ.

ವಿಶೇಷವಾಗಿ ದುಆ ಮಾಡುತ್ತಿರಿ. ಈ ಪ್ರಾರ್ಥನೆಗಳು ಜಾರಿಯಲ್ಲಿರುವುದಾದರೆ, ಇನ್‌ಶಾ ಅಲ್ಲಾಹ್ – ಎದುರಾಳಿಗಳು ದಾರುಣವಾದ ಅಂತ್ಯವನ್ನು ಕಾಣುವರು. ಅಲ್ಲಾಹನು ನಮಗೆ ಪ್ರಾರ್ಥನೆ ಮಾಡುವ ಸೌಭಾಗ್ಯವನ್ನು ಸಹ ನೀಡಲಿ ಮತ್ತು ಅವುಗಳನ್ನು ಸ್ವೀಕರಿಸಲಿ – ಆಮೀನ್.

*****


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 29-01-2021*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email**: khutuba.kannada@gmail.com*

**You can find all the Sermons archived at**: www.alislam.org/friday-sermon